

'ಕಿಸ್' ಕಲಾಕೃತಿ ಒಳಗೊಂಡಿರುವ ಬೆಲ್ವೆಡೀರ್ ಅರಮನೆ

ಎಂದಿಗೂ ಮದುವೆಯಾಗದೆ, ಬೊಹೆಮಿನಯನ್ ಶೈಲಿಯಲ್ಲಿ ಸ್ವೇಚ್ಛೆಯಿಂದ ಬದುಕಿ, ಒಟ್ಟಾರೆ 14 ಮಕ್ಕಳ ತಂದೆಯಾಗಿದ್ದನಂತೆ. ಅವನ ಅಂತರ್ಗತ ಲೈಂಗಿಕ ಹರಿವೇ ಕಲೆಯ ಜೀವವೂ ಆಯಿತು ಎನ್ನುವವರಿದ್ದಾರೆ.

ಗೋಡೆಯ ಮೇಲಿನ ಮ್ಯೂರಲ್ ಕಲೆ, ಲ್ಯಾಂಡ್‌ಸ್ಕೇಪ್, ಸಾಂಪ್ರದಾಯಿಕ ಕಲೆ, ಶಿಲ್ಪ, ವಸ್ತ್ರವಿನ್ಯಾಸ ಇನ್ನಿತರ ಹಲವು ಕಲಾವಿಧಾನಗಳಲ್ಲಿ ತೊಡಗಿಕೊಂಡ ಕ್ಲಿಂಟ್ 'ಹೆಣ್ಣನ್ನೇ' ಮುಖ್ಯ ವಿಷಯವಾಗಿಟ್ಟುಕೊಂಡು ಚಿತ್ರಿಸಿದ ಕಲಾಕಾರ. ಗೊಸ್ಟಾವ್ ಕ್ಲಿಂಟ್ ತನ್ನನ್ನು ಕುರಿತು ತಾನು ಬರೆದುಕೊಂಡದ್ದು ಬಹಳ ಕಡಿಮೆ. ತನ್ನ ಕಲಾ ಕೌಶಲ್ಯದ ಬಗ್ಗೆ ಬರೆದುಕೊಂಡದ್ದೂ ಕಡಿಮೆ. ತನ್ನ ಬದುಕನ್ನು ತಿಳಿಯಬೇಕಾದರೆ ನನ್ನ ಕಲಾಕೃತಿಗಳನ್ನು ನೋಡಿ ಎನ್ನುತ್ತಿದ್ದ ಸರಳ, ಆದರೆ ಗೌಪ್ಯ ಬದುಕಿನ ವ್ಯಕ್ತಿಯಾಗಿದ್ದ. ಬಡತನದಲ್ಲಿ ಹುಟ್ಟಿದರೂ ತನ್ನ ಜೀವಿತ ಕಾಲದಲ್ಲೇ ಅತ್ಯಂತ ಪ್ರಸಿದ್ಧನಾದವನು. 1898–1908ರ ಅವನ ಜೀವಿತ ಕಾಲವನ್ನು 'ವರ್ಣ ಕಾಲ' ಎಂದು ಬಣ್ಣಿಸಲಾಗುತ್ತದೆ. ಆ ಕಾಲದಲ್ಲಿ ಅವನ ಕಲೆಗೆ ಪ್ರಶಂಸೆ ಮತ್ತು ಅತ್ಯುನ್ನತ ಮನ್ನಣೆ ದೊರಕಿತು.

ಹಲವು ಕಲಾವಿದರ ಜೊತೆ ಸೇರಿ ವಿಯೆನ್ನಾದ ಮ್ಯೂಸಿಯಂನ ಗೋಡೆಗಳ ಮೇಲೆ ರಚಿಸಿದ ಚಿತ್ರಗಳಿಗಾಗಿ 1888ರಲ್ಲಿ ಅಂದಿನ ಆಸ್ಟ್ರಿಯಾದ ರಾಜ ಗುಸ್ಟಾವ್‌ಗೆ 'ಸುವರ್ಣ ವರ್ಗದ ಗೌರವ'ವನ್ನು ನೀಡಿ ಗುರುತಿಸಿದ. 'ಡೆತ್ ಅಂಡ್ ಲೈಫ್' ಎನ್ನುವ ಆವನ ಕಲಾಕೃತಿ 1911ರಲ್ಲಿ ರೋಂನಲ್ಲಿ ನಡೆದ ಜಾಗತಿಕ ಕಲಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆಯಿತು. ಕಿಸ್ ರಚಿಸುವ ವೇಳೆಗೆ ಗುಸ್ಟಾವ್ ಕ್ಲಿಂಟ್ ಅದೆಷ್ಟು ಪ್ರಸಿದ್ಧನಾಗಿದ್ದನೆಂದರೆ, 'ಕಿಸ್' ಕಲಾಕೃತಿಯನ್ನು ಆತ ಪೂರ್ಣಗೊಳಿಸುವ ಮುನ್ನವೇ ಅದನ್ನು ಆಸ್ಟ್ರಿಯಾದ ಬೆಲ್ವಡೇರ್ ಮ್ಯೂಸಿಯಂ ಆ ಕಾಲದ ಯಾವುದೇ ಕಲಾಕಾರನಿಗೆ ಕೊಡುವುದಕ್ಕಿಂತಲೂ ಐದು ಪಟ್ಟು ಹೆಚ್ಚು ಹಣ ಕೊಟ್ಟು ಖರೀದಿಸಿಬಿಟ್ಟಿತು. ಆಗಿಂದಲೂ ಅದು ಆಸ್ಟ್ರಿಯಾದ ಮುಖ್ಯ ಆಸ್ತಿಗಳಲ್ಲಿ ಒಂದಾಗಿದೆ. ಅಲ್ಲಿಂದ ಮುಂದಕ್ಕೆ ಎಂದೂ ಮಾರಾಟಕ್ಕೆ ಬರದ ಆ ಕೃತಿ ಗುಸ್ಟಾವ್‌ನ ನಂಬರ್ ಒನ್ ಕೃತಿಯಾಗಿದ್ದು, ಜಗತ್ತಿನಲ್ಲೇ ಅತಿ ದುಬಾರಿ ಕಲಾಕೃತಿಗಳಲ್ಲೊಂದೆನಿಸಿದೆ.

1918ರಲ್ಲಿ ವಿಶ್ವವನ್ನು ಕಾಡಿದ ಇನ್‌ಫ್ಲುಯೆಂಜಾ ಕಾಯಿಲೆಗೆ ತುತ್ತಾದ ಗುಸ್ಟಾವ್ ಕ್ಲಿಂಟ್ ಅತ್ಯಂತ ಅನಿರೀಕ್ಷಿತವಾಗಿ ವಿಧಿವಶನಾದ. ಆಗ ಆತನ ವಯಸ್ಸು 55 ವರ್ಷ. ಅವನ ಅನೇಕ ಕಲಾಕೃತಿಗಳು ಪೂರ್ಣವಾಗದೆ ಉಳಿದವು.

ಸತ್ತ ನಂತರವೂ ಅವನ ಖ್ಯಾತಿ ಮುಂದುವರೆಯಿತು. ಆತ ಚಿನ್ನದ ಎಲೆಗಳನ್ನು ಬಳಸಿ ಚಿತ್ರಿಸಿದ ಅಡಿಲ್ ಬ್ಲೊಕ್ ಬಾರ್‌ಳ ಚಿತ್ರ 2006ರಲ್ಲಿ 135 ದಶಲಕ್ಷ ಡಾಲರ್‌ಗಳಿಗೆ ಮಾರಾಟವಾಯಿತು. 2016ರಲ್ಲಿ ಅದೇ ಚಿತ್ರ 150 ದಶಲಕ್ಷ ಡಾಲರ್‌ಗಳಿಗೆ ಮರುಮಾರಾಟವಾಯಿತು. ಅದನ್ನೀಗ ನ್ಯೂಯಾರ್ಕ್ ಮ್ಯೂಸಿಯಂನಲ್ಲಿ ನೋಡಬಹುದು. ಗುಸ್ಟಾವ್‌ನ ಐದು ಕಲಾಕೃತಿಗಳು ಒಟ್ಟು 357 ದಶಲಕ್ಷ ಡಾಲರುಗಳಿಗೆ ಮಾರಾಟವಾಗಿರುವುದು ಕೂಡ ದಾಖಲೆಯೇ.

"ಕಿಸ್ ಒಂದು ಮಹಾಕಲಾಕೃತಿ ಏನು ಮಾಡಬಹುದೋ ಅದನ್ನು ಮಾಡುತ್ತದೆ. ಲಿಯೋನಾರ್ಡೊ ಡಿ ವಿಂಚಿಯ ಪುಟ್ಟ ಮೊನಾಲಿಸಾಳಿಗೆ ಹೋಲಿಸಿದರೆ ಕಿಸ್ ನಮ್ಮ ದೃಷ್ಟಿಯನ್ನು ಸೆರೆಹಿಡಿಯುತ್ತದೆ. ಮೇಲ್ನೋಟಕ್ಕೆ ಕಾಣಿಸುವುದರ ಹೊರತಾಗಿ, ನಮ್ಮ ಸುಪ್ತ ಪ್ರಜ್ಞೆಯ ಹಿಂದಿರುವ ಸೆಳೆತವನ್ನು ಜಾಗೃತಗೊಳಿಸುತ್ತದೆ, ಬದುಕಿನ ಸರಪಳಿಯ ಮೂಲವನ್ನು ಎತ್ತಿ ಹಿಡಿಯುತ್ತದೆ" ಎಂದು ಕೆಲವರು ಪತ್ರಿಕೆಗಳಲ್ಲಿ ಬರೆದಿದ್ದಾರೆ. ಗುಸ್ಟಾವ್ ಬಹಳಷ್ಟು ನಗ್ನ ಕಲಾಕೃತಿಗಳನ್ನು ರಚಿಸಿದ್ದ ಕಾರಣ, 'ಕಿಸ್' ಚಿತ್ರದಲ್ಲಿನ ಪ್ರೇಮಿಗಳು ಬಟ್ಟೆ ಧರಿಸಿದ್ದರೂ ಅದನ್ನು 'ನಗ್ನ ಚಿತ್ರ' ಎಂದು ಕೆಲವು ಸಮಕಾಲೀನರು ಕರೆದದ್ದೂ ಇದೆ.

2003ರಲ್ಲಿ ಆಸ್ಟ್ರಿಯಾ ಸರಕಾರ 14 ಗ್ರಾಂ ತೂಕದ ನೂರು ಯೂರೋಗಳ ಚಿನ್ನದ ನಾಣ್ಯಗಳನ್ನು (ಲಿಮಿಟೆಡ್ ಎಡಿಷನ್) ಹೊರತಂದಿತು. ನಾಣ್ಯದ ಒಂದು ಕಡೆ ಗುಸ್ಟಾವ್ ಕ್ಲಿಂಟ್ ಇದ್ದರೆ, ಮತ್ತೊಂದೆಡೆ ಕಿಸ್ ಕಲಾಕೃತಿ ಮುದ್ರಿತವಾಗಿದೆ.

ಆಸ್ಟ್ರಿಯಾದ ಮಹೋನ್ನತ ಕಲಾಕೃತಿ 'ಕಿಸ್'ನ ಒಂದು ಪ್ರತಿಕೃತಿಯ ಮುದ್ರಣವನ್ನು ಗಿಫ್ಟ್ ಶಾಪ್‌ನಲ್ಲಿ ಖರೀದಿಸಿ ನಮ್ಮ ಜೊತೆಯಲ್ಲಿ ಹೊತ್ತೇ ಹೊರಬಿದ್ದೆವು.